**ಅರಸು ಅಸೋಸಿಯೇಷನ್ (ರಿ.)**

**ನೋಂದಣಿ ಸಂಖ್ಯೆ : 469/74/75**

**ನಂ. 8, "ಅರಸು ಭವನ", ಮಿಲ್ಲರ್ ಕೆರೆ, ಜಸ್ಮಾದೇವಿ ಭವನ ರಸ್ತೆ, ವಸಂತನಗರ,**
**ಬೆಂಗಳೂರು–560052**


## ದಿನಾಂಕ : 28–05–2023ರಂದು ನಡೆಯಲಿರುವ ವಿಶೇಷ ಸರ್ವಸದಸ್ಯರ ಸಭೆಯ ಅನುಮೋದನೆಗಾಗಿ ಮಂಡಿಸಿರುವ

# ಸಂಘದ ಧ್ಯೇಯೋದ್ದೇಶಗಳು ಹಾಗೂ ಜ್ಞಾಪನ ಪತ್ರ ಮತ್ತು ನಿಯಮ ನಿಬಂಧನೆಗಳ ಕೆಲವೊಂದು ತಿದ್ದುಪಡಿಯ ಕರಡು ಪ್ರತಿ

**ಈ ಕೆಳಕಂಡ ಬೈಲಾ ಉಪಸಮಿತಿ ಸದಸ್ಯರುಗಳು ಸಂಘದ ಧ್ಯೇಯೋದ್ದೇಶಗಳು ಹಾಗೂ ಜ್ಞಾಪನ ಪತ್ರ ಮತ್ತು ನಿಯಮ ನಿಬಂಧನೆಗಳ ತಿದ್ದುಪಡಿಯನ್ನು ತಯಾರಿಸಿ ವಿಶೇಷ ಸರ್ವಸದಸ್ಯರ ಸಭೆಯಲ್ಲಿ ಮಂಡಿಸಲು ಶಿಫಾರಸ್ಸು ಮಾಡಿರುತ್ತಾರೆ.**

| ಕ್ರ.ಸಂ. | ಹೆಸರು | ಸಹಿ |
|---|---|---|
| 1. | ಡಾ. ಬಿ. ಪಂಪಾದೇವಿ<br>ಬೈಲಾ ಉಪಸಮಿತಿಯ ಅಧ್ಯಕ್ಷರು | |
| 2. | ಡಾ. ಎಲ್. ದೇವರಾಜೇ ಅರಸ್<br>ಬೈಲಾ ಉಪಸಮಿತಿಯ ಕಾರ್ಯದರ್ಶಿ | |
| 3. | ಶ್ರೀಮತಿ ಎಸ್. ನಾಗನಂದಿನಿ<br>ಬೈಲಾ ಉಪಸಮಿತಿಯ ಸಂಚಾಲಕರು | |
| 4. | ಶ್ರೀ ಸುಬ್ರಮಣ್ಯ. ಎನ್.ಜಿ.<br>ಬೈಲಾ ಉಪಸಮಿತಿಯ ಸದಸ್ಯರು | |
| 5. | ಶ್ರೀ ವಿಲಾಸ್ ಅರಸ್ ಕೆ.ವಿ.<br>ಬೈಲಾ ಉಪಸಮಿತಿಯ ಸದಸ್ಯರು | |
| 6. | ಶ್ರೀ ಅಶ್ವತ್ತಯ್ಯ<br>ಸಹಕಾರ ಇಲಾಖೆಯ ನಿವೃತ್ತ ಅಧಿಕಾರಿ | |

# ಅರಸು ಅಸೋಸಿಯೇಷನ್ (ರಿ.)

**ನೋಂದಣಿ ಸಂಖ್ಯೆ : 469/74/75**

**ನಂ. 8, "ಅರಸು ಭವನ", ಮಿಲ್ಲರ್ ಕೆರೆ, ಜಸ್ಮಾದೇವಿ ಭವನ ರಸ್ತೆ, ವಸಂತನಗರ,**
**ಬೆಂಗಳೂರು–560052**

## ವಿಶೇಷ ಮಹಾಸಭೆಯ ಸೂಚನಾ ಪತ್ರ

**ಸನ್ಮಾನ್ಯ ಸದಸ್ಯರೇ,**

**ಅರಸು ಅಸೋಸಿಯೇಷನ್** (ರಿ.) ಇದರ ವಿಶೇಷ ಸರ್ವಸದಸ್ಯರ ಸಭೆಯನ್ನು ಕಾರ್ಯಸೂಚಿಯಲ್ಲಿ ನಮೂದಿಸಲಾಗಿರುವ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳುವ ಸಲುವಾಗಿ ಅಧ್ಯಕ್ಷರಾದ ಶ್ರೀ ಡಿ. ಕೃಷ್ಣೇಅರಸುರವರ ಅಧ್ಯಕ್ಷತೆಯಲ್ಲಿ **ದಿನಾಂಕ 28–05–2023ನೇ ಭಾನುವಾರ** ಬೆಳಿಗ್ಗೆ 10–00 ಗಂಟೆಗೆ **ಅಸೋಸಿಯೇಷನ್ ಸಭಾಂಗಣದಲ್ಲಿ** ಏರ್ಪಡಿಸಲಾಗಿದೆ. ಸದಸ್ಯರೆಲ್ಲರು ಸಕಾಲಕ್ಕೆ ಬಂದು ಸಕ್ರಿಯವಾಗಿ ಭಾಗವಹಿಸಿ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಿಕೊಡಬೇಕಾಗಿ ಕೋರಲಾಗಿದೆ.

**ವಿಷಯಗಳು**

1. ಪ್ರಾರ್ಥನೆ / ಸಂಸ್ಥಾನ ಗೀತೆ
2. ಸ್ವಾಗತ ಭಾಷಣ
3. ಅರಸು ಅಸೋಸಿಯೆಷನ್‌ನ ಧ್ಯೇಯೋದ್ದೇಶಗಳ ತಿದ್ದುಪಡಿ (ಉದ್ದೇಶಿತ ತಿದ್ದುಪಡಿ ಪ್ರತಿ ಲಗತ್ತಿಸಿದೆ)
4. ಅರಸು ಅಸೋಸಿಯೆಷನ್‌ನ ನಿಯಮ ನಿಬಂಧನೆಗಳ ತಿದ್ದುಪಡಿ (ಉದ್ದೇಶಿತ ತಿದ್ದುಪಡಿ ಪ್ರತಿ ಲಗತ್ತಿಸಿದೆ)
5. ಕರ್ನಾಟಕ ಸರ್ಕಾರವು ಅರಸು ಅಸೋಸಿಯೇಷನ್‌ನ ಸಮುದಾಯ ಭವನ ಕಟ್ಟಡ ನಿರ್ಮಾಣ ಮತ್ತು ಮುಂದಿನ ಉದ್ದೇಶಿತ ಯೋಜನೆಗಳ ಕಾಮಗಾರಿಗೆ ರೂ. 5 ಕೋಟಿ ಮಂಜೂರಾಗಿರುವ ಆದೇಶವನ್ನು ಓದಿ ದಾಖಲಿಸುವ ವಿಚಾರ
6. ಅಧ್ಯಕ್ಷರ ಭಾಷಣ
7. ವಂದನಾರ್ಪಣೆ

ಕಾರ್ಯಕಾರಿ ಸಮಿತಿ ಪರವಾಗಿ
ಸಹಿ/–
**(ಡಿ. ಉದಯ್ ಭಾಸ್ಕರ್ ಅರಸ್)**
ಗೌ॥ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ : 07–05–2023

## **ಅರಸು ಅಸೋಸಿಯೇಷನ್ (ರಿ) ಬೆಂಗಳೂರು**

ನಂ. 8, "ದೇವರಾಜ ಅರಸು ಭವನ",
ಜಸ್ಮಾ ದೇವಿ ಭವನ ರಸ್ತೆ, ವಸಂತ ನಗರ ಬೆಂಗಳೂರು – 560052

### **ಉದೇಶಿತ ಧ್ಯೇಯೋದ್ದೇಶಗಳ ತಿದ್ದುಪಡಿ**

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | **ವಿಳಾಸ :** ನಂ. 8 "ದೇವರಾಜ ಅರಸು ಭವನ" ಜಸ್ಮಾ ದೇವಿ ಭವನ ರಸ್ತೆ, ವಸಂತ ನಗರ, ಬೆಂಗಳೂರು – 560052 | | **ಹೆಸರು : ಅರಸು ಅಸೋಸಿಯೇಷನ್** (ರಿ) ನಂ. 8, "ಅರಸು ಭವನ", ಮಿಲ್ಲರ್ ಕೆರೆ ರಸ್ತೆ, ಜಸ್ಮಾ ದೇವಿ ಭವನ ರಸ್ತೆ, ವಸಂತ ನಗರ ಬೆಂಗಳೂರು– 560052 | ಸ್ಪಷ್ಟಪಡಿಸಿದೆ. |
| | | | **ಕ್ರಮ ಸಂಖ್ಯೆ 1 ರಿಂದ 9 ರವರೆಗೆ ಬದಲಾವಣೆ ಇಲ್ಲ.** | |
| 10) | ಸಂಘದ ಸದಸ್ಯರುಗಳ ಮತ್ತು ಅರಸು ಜನಾಂಗದ ಉಪಯೋಗಕ್ಕಾಗಿ ವಾಚನಾಲಯ ಸ್ಥಾಪಿಸುವುದು. ಪ್ರಾಚೀನ ಮತ್ತು ಇತಿಹಾಸಕ್ಕೆ ಸಂಬಂಧಪಟ್ಟ ವಸ್ತುಗಳನ್ನು ಸಂಗ್ರಹಿಸುವುದು. | 10) | ಸಂಘದ ಸದಸ್ಯರುಗಳ ಮತ್ತು ಅರಸು ಜನಾಂಗದ ಉಪಯೋಗಕ್ಕಾಗಿ ವಾಚನಾಲಯ ಸ್ಥಾಪಿಸುವುದು ಹಾಗೂ ಪ್ರಾಚೀನ ಮತ್ತು ಇತಿಹಾಸಕ್ಕೆ ಸಂಬಂಧಪಟ್ಟ ವಸ್ತುಗಳನ್ನು ಸಂಗ್ರಹಿಸಿ ನಿರ್ವಹಿಸುವುದು. | ಸ್ಪಷ್ಟಪಡಿಸಿದೆ. |
| | | | **ಕ್ರಮ ಸಂಖ್ಯೆ 11 ರಿಂದ 13 ರವರೆಗೆ ಬದಲಾವಣೆ ಇಲ್ಲ.** | |
| | **ಹೊಸ ಸೇರ್ಪಡೆ :** | 14) | ಶೈಕ್ಷಣಿಕವಾಗಿ, ಸಂಶೋಧನೆಗಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅಭಿವೃದ್ಧಿ ಹೊಂದಲು ಕೇಂದ್ರಗಳ ಸ್ಥಾಪನೆ ಮಾಡುವುದು ಹಾಗೂ ನಿರ್ವಹಿಸುವುದು. | ಧ್ಯೇಯೋದ್ದೇಶಗಳ ವಿಸ್ತರಣೆಗಾಗಿ |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | **ಹೊಸ ಸೇರ್ಪಡೆ :** | 15) | ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ಅರಸು ಜನಾಂಗದ ವಿದ್ಯಾರ್ಥಿಗಳಿಗೆ ಅವರ ವ್ಯಾಸಂಗಕ್ಕೆ ಧನ ಸಹಾಯ ಮಾಡುವುದು. | ಧ್ಯೇಯೋದ್ದೇಶಗಳ ವಿಸ್ತರಣೆಗಾಗಿ |
| | | 16) | ಅರಸು ಜನಾಂಗದ ವೈವಾಹಿಕ ಮಾಹಿತಿ ಕೇಂದ್ರ ಸ್ಥಾಪನೆ ಮಾಡುವುದು. | |
| | | 17) | ಉನ್ನತ ವ್ಯಾಸಂಗಕ್ಕೆ ಹೋಗಲು ಇಚ್ಛಿಸುವ ಅರಸು ಜನಾಂಗದ ಮಕ್ಕಳುಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು ಹಾಗೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಡೆಸುವ ಲೋಕ ಸೇವಾ ಆಯೋಗಗಳ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜಾರಾಗುವ ಅಭ್ಯರ್ಥಿಗಳಿಗೆ ತರಬೇತಿ ನೀಡುವುದು. | |
| | | 18) | ಉಚಿತ ಆರೋಗ್ಯ ತಪಸಾಣಾ ಶಿಬಿರ, ರಕ್ತದಾನ ಶಿಬಿರ, ಕುಟುಂಬ ಯೋಜನೆ ಹಾಗೂ ಸಾಂಕ್ರಮಿಕ ರೋಗ ತಡೆ ಮುಂತಾದ ಜನಪರ ಕಾರ್ಯ ಕ್ರಮಗಳನ್ನು ಸಂಘದ ವತಿಯಿಂದ ಹಮ್ಮಿ ಕೊಂಡು ಸಮಾಜ ಸೇವೆಯನ್ನು ಮಾಡುವುದು. | |
| | | 19) | ಉದ್ಯೋಗ ಮಾಹಿತಿ ಕೇಂದ್ರ ತೆರೆಯುವುದು ಹಾಗೂ ಆಗಿಂದಾಗ್ಯೆ ಉದ್ಯೋಗ ಮೇಳವನ್ನು ಏರ್ಪಡಿಸುವುದು. | |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | **ಹೊಸ ಸೇರ್ಪಡೆ :** | 20) | ಜ್ಞಾನಾಭಿವೃದ್ಧಿ, ಔದ್ಯೋಗಿಕ ಕುಶಲತೆ, ಕೌಶಲ್ಯಾಭಿರುದ್ಧಿ ಕರಕುಶಲ ಅಥವಾ ಇತರೆ ಉಪಯೋಗಿ ಜ್ಞಾನಾರ್ಜನೆಗಳಿಗೆ ಪ್ರೋತ್ಸಾಹ ನೀಡುವುದು. | ಧ್ಯೇಯೋದ್ದೇಶಗಳ ವಿಸ್ತರಣೆಗಾಗಿ |
| | | 21) | ವಿಚಾರಗೋಷ್ಠಿ ಸಮ್ಮೇಳನ, ತಾತ್ವಿಕ ವಿಚಾರಗಳ ಸಂಕೀರ್ಣ ಹಾಗೂ ಕಾರ್ಯಾಗಾರ ಇವುಗಳನ್ನು ಆಗಿಂದಾಗ್ಗೆ ಆಯೋಜಿಸುವುದು. | |
| | | 23) | ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಅರಸು ಜನಾಂಗದ ಮಹಾನೀಯರನ್ನು ಗುರುತಿಸಿ ಅಭಿನಂದಿಸವುದು. | |
| | | 24) | ಅರಸು ಜನಾಂಗದ ಸದಸ್ಯರುಗಳಿಗೆ ಕಾನೂನು ನೆರವು ಬೇಕಾದಲ್ಲಿ ಉಚಿತ ಕಾನೂನು ನೆರವು ಪಡೆಯಲು ಸಹಕರಿಸುವುದು. | |
| | | 25) | ಪ್ರತಿವರ್ಷ ರಾಜ್ಯ, ರಾಷ್ಟ್ರೀಯ, ನಾಡಹಬ್ಬ, ಜಯಂತಿ, ಪುಣ್ಯ ಸ್ಮರಣೆ ಹಾಗೂ ಇನ್ನಿತರೆ ಹಬ್ಬಗಳನ್ನು ಅಚರಿಸುವುದು. ವಿಶೇಷವಾಗಿ ಅರಸು ಜನಾಂಗಕ್ಕೆ ಸಂಬಂಧಿಸಿದ ಧಾರ್ಮಿಕ/ ಸಾಂಸ್ಕೃತಿಕ/ಕ್ರೀಡಾ ಹಾಗೂ ಆರೋಗ್ಯ ಕೂಟಗಳನ್ನು ಏರ್ಪಡಿಸುವುದು ಹಾಗೂ ಪಾಲ್ಗೊಳ್ಳುವುದು. | |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | **ಹೊಸ ಸೇರ್ಪಡೆ :** | 26) | ಅಸೋಸಿಯೇಷನ್ ಉದ್ದೇಶಗಳನ್ನು ಹೊಂದಿರತಕ್ಕಂತಹ ಇತರೆ ಸಮಾನ ಮನಸ್ಕರುಳ್ಳ ಸಂಘ ಸಂಸ್ಥೆಗಳೊಂದಿಗೆ ಸಹಕಾರವನ್ನು ಹೊಂದುವುದು. | ಧ್ಯೇಯೋದ್ದೇಶಗಳ ವಿಸ್ತರಣೆಗಾಗಿ |
| | | 22) | ಸ್ವಸಹಾಯ ಗುಂಪುಗಳ ರಚನೆ ಹಾಗೂ ಅವರುಗಳಿಗೆ ಸ್ವಯಂ – ಉದ್ಯೋಗವಕಾಶ ಮಾಡಿಕೊಡಲು ಉತ್ತೇಜಿಸುವುದು. | |
| | | 27) | ಆಸೋಸಿಯೇಷನ್ ಸದಸ್ಯರುಗಳಿಂದ ಹಾಗೂ ಸಮುದಾಯದಿಂದ, ನಿವಾಸಿಗಳಿಂದ, ಅನಿವಾಸಿ ಅರಸು ಜನಾಂಗದವರಿಂದ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಹಾಗೂ ಸ್ಥಳೀಯ ಸಂಸ್ಥೆಗಳಿಂದ, ಅನುದಾನ, ವಂತಿಕೆ ಮತ್ತು ಸಹಾಯ ಧನವನ್ನು ಪಡೆಯುವುದು ಮತ್ತು ಅವುಗಳನ್ನು ನಿಭಾಯಿಸುವುದು. | |
| | | 28) | ಅಸೋಸಿಯೇಷನ್‌ನ ಧ್ಯೇಯೋದ್ದೇಶಗಳನ್ನು ಸಮಗ್ರವಾಗಿ ಕಾರ್ಯರೂಪಕ್ಕೆ ತರಲು ಅವಶ್ಯಕವೆನಿಸಿದ ಕಡೆಯಲೆಲ್ಲಾ ಬೈಲಾ/ ಉಪವಿಧಿಗಳನ್ನು ರಚಿಸಿಕೊಳ್ಳುವುದು. | |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | **ಹೊಸ ಸೇರ್ಪಡೆ :** | 29) | ಆಸೋಸಿಯೇಷನ್‌ನ ಧ್ಯೇಯೋದ್ದೇಶಗಳ ಈಡೇರಿಕೆಗಾಗಿ ಚಂದ, ದಾನ, ಪ್ರಕಟಣೆ, ಸಾಂಸ್ಕೃತಿ ಪ್ರದರ್ಶನ ಮುಂತಾದವುಗಳ ಮೂಲಕ ಸಂಘಕ್ಕೆ ದೇಣಿಗೆಯನ್ನು ನಗದು/ ಚೆಕ್/ ಡ್ರಾಫ್ಟ್/ಆನ್ಲೈನ್ ರೂಪದಲ್ಲಿ ಅಥವಾ ವಸ್ತುಗಳ ರೂಪದಲ್ಲಿ ಪಡೆದು ನಿರ್ವಹಿಸುವುದು. | ಧ್ಯೇಯೋದ್ದೇಶಗಳ ವಿಸ್ತರಣೆಗಾಗಿ |
| | | 30) | ಅಸೋಸಿಯೇಷನ್‌ನ ಚರ-ಸ್ಥಿರ ಆಸ್ತಿಗಳನ್ನು ವೃದ್ಧಿಸಿಕೊಳ್ಳಲು ಕ್ರಯದಿಂದ, ಭೋಗ್ಯದಿಂದ, ಕರಾರಿನಿಂದ, ದಾನ, ದತ್ತಿ ಮುಂತಾದವುಗಳಿಂದ ಮತ್ತು ಸರ್ಕಾರದಿಂದ ಸಂಘ ಸಂಸ್ಥೆಗಳಿಂದ, ಸಾರ್ವಜನಿಕರಿಂದ ನಗದು ಅಥವಾ ವಸ್ತುಗಳ ರೂಪದಲ್ಲಿ ಪಡೆದು ನಿರ್ವಹಿಸುವುದು. | |
| | | 31) | ಸಾರ್ವಜನಿಕರಿಗಾಗಿ ಯುಕ್ತವೆನಿಸಿದ ಕಾರ್ಯಕ್ರಮಗಳನ್ನುಹಮ್ಮಿಕೊಳ್ಳುವುದು ಮತ್ತು ಉತ್ತೇಜಿಸುವುದು. | |
| | | 32) | ಸಂಘದ ಅಧೀನದಲ್ಲಿ ಕೇಂದ್ರ ಸ್ಥಾನದಲ್ಲಿ ಯುವ ಘಟಕ, ಮಹಿಳಾ ಘಟಕ ಹಾಗೂ ಅವಶ್ಯವಿರುವ ಇನ್ನಿತರ ಘಟಕಗಳನ್ನು ಸ್ಥಾಪಿಸುವುದು. ಅವಶ್ಯವಿದ್ದಲ್ಲಿ ಈ ಘಟಕಗಳನ್ನು ಅರಸು ಕುಟುಂಬಗಳು ವಾಸವಾಗಿರುವ ಗ್ರಾಮ, ಹೋಬಳಿ, ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಿಗೆ ವಿಸ್ತರಿಸುವುದು. | |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | **ಹೊಸ ಸೇರ್ಪಡೆ :** | 33) | ಆಸೋಸಿಯೇಷನ್‌ನ ನಿಧಿ, ಲಾಭಾಂಶ (ಯಾವುದಾದರು ಇದ್ದಲ್ಲಿ) ಅಥವಾ ಬೇರಾವುದೇ ಆದಾಯುಗಳನ್ನು ಮೇಲೆ ಹೇಳಿದ ಧ್ಯೇಯೋದ್ದೇಶಗಳನ್ನು ಈಡೇರಿಸುವ ಕಾರಣಗಳ ಸಲುವಾಗಿ ಮತ್ತು ಸಂಘದ ಅಭಿವೃದ್ದಿಗಾಗಿ ಮಾತ್ರ ಉಪಯೋಗಿಸತಕ್ಕದ್ದು. ಅಲ್ಲದೇ ಅಂತಹ ಹಣವನ್ನು ಯಾವುದೇ ಸಂದರ್ಭದಲ್ಲಿ ಸಂಘದ ಸದಸ್ಯರುಗಳಿಗೆ ಹಂಚಲು ಅವಕಾಶವಿರುವುದಿಲ್ಲ. | ಧ್ಯೇಯೋದ್ದೇಶಗಳ ವಿಸ್ತರಣೆಗಾಗಿ |
| | | 34) | ಸಂಘದ ಸದಸ್ಯರುಗಳಿಗಾಗಿ ಮರಣೋತ್ತರ ನಿಧಿಯನ್ನು ಸ್ಥಾಪಿಸುವುದು. | |
| | | 35) | ಆಧ್ಯಾತ್ಮಿಕ ಹಾಗೂ ಯೋಗ ಶಿಬಿರಗಳನ್ನು ಆಯೋಜಿಸುವುದು ಮತ್ತು ಕೇಂದ್ರಗಳನ್ನು ಸ್ಥಾಪಿಸುವುದು. | |
| | | 36) | ಪರಿಸರ ಸಂರಕ್ಷಣೆ, ಅರಣ್ಯ ಸಂರಕ್ಷಣೆ, ಮತ್ತು ವನ್ಯಜೀವಿ ಸಂರಕ್ಷಣೆಗಾಗಿ ಕಾರ್ಯಕ್ರಮಗಳನ್ನು ರೂಪಿಸುವುದು. | |
| | | 37) | ನಾಡಿನ ಪರಂಪರೆಯನ್ನು ಉಳಿಸಿ ಬೆಳೆಸಲು ಉತ್ತೇಜಿಸುವುದು. | |
| | | 38) | ಐತಿಹಾಸಿಕ, ಪ್ರಾಕೃತಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ವೃದ್ದಿಸಲು ಸಹಕರಿಸುವುದು. | |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | | 39) | ಸದಸ್ಯರಲ್ಲಿ ಛಾಯಗ್ರಹಣ ಮತ್ತು ಚಲನಚಿತ್ರ ನಿರ್ವಾಣದಲ್ಲಿ ಆಸಕ್ತಿಯನ್ನು ಉತ್ತೇಜಿಸುವುದು ಮತ್ತು ಸೃಜನ ಶೀಲತೆಯನ್ನು ಪ್ರದರ್ಶಿಸಲು ಮತ್ತು ಸಂಬಂಧಿತ ಕೌಶಲ್ಯಗಳಲ್ಲಿ ಸುಧಾರಣೆಗೆ ಅನುಕೂಲವಾಗುವಂತೆ ವೇದಿಕೆಯನ್ನು ಒದಗಿಸುವುದು. | |

ಸಹಿ/–
**ಡಿ. ಕೃಷ್ಣೇಅರಸ್**
ಅಧ್ಯಕ್ಷರು

ಸಹಿ/–
**ಉದಯ್ ಭಾಸ್ಕರ್ ಅರಸ್**
ಕಾರ್ಯದರ್ಶಿ

# ಅರಸು ಅಸೋಸಿಯೇಷನ್ (ರಿ) ಬೆಂಗಳೂರು

ನಂ.8 "ಅರಸು ಭವನ" ಜಸ್ಮಾ ದೇವಿ ಭವನ ರಸ್ತೆ,
ವಸಂತ ನಗರ, ಬೆಂಗಳೂರು 560052.

## ಉದ್ದೇಶಿತ ನಿಯಮ ನಿಬಂಧನೆಗಳ ತಿದ್ದುಪಡಿ

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| 1) | **ಹೆಸರು ಮತ್ತು ವಿಳಾಸ : ಅರಸು ಅಸೋಸಿಯೇಷನ್ (ರಿ) ಬೆಂಗಳೂರು** ನಂ. 8 "ದೇವರಾಜ ಅರಸು ಭವನ" ಜಸ್ಮಾ ದೇವಿ ಭವನ ರಸ್ತೆ, ವಸಂತ ನಗರ, ಬೆಂಗಳೂರು – 560052. | 1) | **ಹೆಸರು ಮತ್ತು ವಿಳಾಸ :**ಅರಸು ಅಸೋಸಿಯೇಷನ್ (ರಿ) ನಂ.8 "ಅರಸು ಭವನ" ಜಸ್ಮಾ ದೇವಿ ಭವನ ರಸ್ತೆ, ವಸಂತ ನಗರ, ಬೆಂಗಳೂರು 560052. | ಸ್ಪಷ್ಟಪಡಿಸಿದೆ. |
| 2) | **ಕಾರ್ಯಾಲಯ :** | 2) | **ಬದಲಾವಣೆ ಇಲ್ಲ.** | |
| 3) | **ಕಾರ್ಯವ್ಯಾಪ್ತಿ:–** ಈ ಸಂಘದ ಪರಿಮಿತಿಯು ಅಖಿಲ ಕರ್ನಾಟಕ ರಾಜ್ಯಕ್ಕೆ ವ್ಯಾಪಿಸಿರತಕ್ಕದ್ದು. | 3) | **ಅ) ಕಾರ್ಯವ್ಯಾಪ್ತಿ:–** ಧ್ಯೇಯೋದ್ದೇಶಗಳ ಉತ್ತೇಜನಕ್ಕಾಗಿ ಈ ಸಂಘದ ಪರಿಮಿತಿಯು ಕರ್ನಾಟಕ ರಾಜ್ಯ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರದೇಶಕ್ಕೆ ವ್ಯಾಪಿಸಿರತಕ್ಕದ್ದು. | ಸ್ಪಷ್ಟಪಡಿಸಿದೆ. |
| | **ಹೊಸ ಸೇರ್ಪಡೆ :** | | ಆ) ಸಂಘದ ಧ್ಯೇಯೋದ್ದೇಶಗಳ/ ಸಾಧನೆ ಅದರ ಜ್ಞಾಪನ ಪತ್ರದಲ್ಲಿ ವಿವರಿಸಿರುವ ಧ್ಯೇಯೋದ್ದೇಶಗಳನ್ನು ಸಾಧಿಸುವು ದಾಗಿರುತ್ತದೆ. | |
| 4) | **ವ್ಯಾಖ್ಯಾನಗಳು :–** | 4) | **ವ್ಯಾಖ್ಯಾನಗಳು / ಪರಿಭಾಷೆಗಳು :–**<br>**ಅ) ಇಂದ ಉ) ವರೆಗೆ ಬದಲಾವಣೆ ಇಲ್ಲ.** | |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| ಊ) | ಸಾಧಾರಣ ಬಹುಮತ : ಅಂದರೆ ಒಟ್ಟು ಸದಸ್ಯರ ಸಂಖ್ಯೆಯಲ್ಲಿ 101 ಸದಸ್ಯರು ಹಾಜರಿರಬೇಕು. | | ಊ)ಸಾಧಾರಣ ಬಹುಮತ :- ಅಂದರೆ ಒಟ್ಟು ಸದಸ್ಯರ ಸಂಖ್ಯೆಯಲ್ಲಿ 1/3 ಸದಸ್ಯರು ಹಾಜರಿರಬೇಕು.<br><br>**ಋ ಬದಲಾವಣೆ ಇಲ್ಲ.** | ಸ್ಪಷ್ಟಪಡಿಸಿದೆ. |
| | **ಹೊಸ ಸೇರ್ಪಡೆ :** | | **ಎ) ಪ್ರತಿಪಾಧಕರು:**-ಸಂಘದ ಸದಸ್ಯತ್ವ ಪಡೆದು ಒಂದು ವರ್ಷ ಪೂರೈಸಿದ ಸದಸ್ಯರು.<br><br>ಏ) **ಪದಾಧಿಕಾರಿಗಳು** ಎಂದರೆ ಸಂಘದ ಧ್ಯೇಯೋದ್ದೇಶಗಳ ಈಡೇರಿಕೆಗಾಗಿ ಆಡಳಿತ ಸಮಿತಿ / ಕಾರ್ಯಕಾರಿ ಸಮಿತಿಯಿಂದ ಆಯ್ಕೆಯಾದ / ಚುನಾಯಿತರಾದ ಅಧ್ಯಕ್ಷರು, ಉಪಾಧ್ಯಕ್ಷರುಗಳು, ಕಾರ್ಯದರ್ಶಿ, ಉಪಕಾರ್ಯದರ್ಶಿ, ಖಜಾಂಚಿ ಎಂದರ್ಥ.<br><br>ಐ) **ಸಭೆ :-** ಎಂದರೆ ಆಡಳಿತ ಸಮಿತಿ/ಕಾರ್ಯಕಾರಿ ಸಮಿತಿಯ ಸಭೆ ಎಂದರ್ಥ.<br><br>ಒ) **ಸಾಮಾನ್ಯ ಸಭೆ/ವಿಶೇಷ ಸರ್ವಸದಸ್ಯರ ಸಭೆ:**-ಎಂದರೆ ಸಂಘದ ಸದಸ್ಯರನ್ನೊಳಗೊಂಡ ನಡೆಸುವ ಸಾಮಾನ್ಯ /ವಿಶೇಷ ಸರ್ವಸದಸ್ಯರ ಸಭೆ ಎಂದರ್ಥ.<br><br>ಓ) **ನೋಂದಣಾಧಿಕಾರಿಗಳು :-** ಎಂದರೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆಯ ಅನ್ವಯ ಸರ್ಕಾರದಿಂದ ನೇಮಕಗೊಂಡು | **ವ್ಯಾಖ್ಯಾನಗಳನ್ನು ವಿಸ್ತರಿಸಿದೆ.** |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | **ಹೊಸ ಸೇರ್ಪಡೆ :** | | ಸಂಘಗಳ ಜಿಲ್ಲಾ ನೋಂದಣಾಧಿಕಾರಿಗಳು ಎಂದರ್ಥ.<br><br>**ಔ) ಅರಸು ಕುಟುಂಬಗಳು ಎಂದರೆ:–** 1916 ರಲ್ಲಿ ಮೈಸೂರು ಅರಮನೆ ಅರಸು ಜನಾಂಗದ ಜನಗಣತಿಗಾಗಿ ರಚಿಸಿದ ಉಪ ಸಮಿತಿಯ ಸದಸ್ಯರುಗಳಾದ ಮೂರು ಜನ ಸದಸ್ಯರಾದ ಶ್ರೀ ಎಂ. ಗೋಪಾಲಕೃಷ್ಣ ಅರಸು ಶ್ರೀ ಎಮ್. ಕೃಷ್ಣೇ ಅರಸು ಮತ್ತು ಶ್ರೀ ಟಿ. ಸುಬ್ಬರಾಜೇ ಅರಸುರವರುಗಳು ನೀಡಿರುವ ವರದಿಯಲ್ಲಿ ಉಲ್ಲೇಖಿಸಿರುವ 'ಎ' ವರ್ಗದ ಗ್ರಾಮಗಳಲ್ಲಿ ವಾಸಿಸುವ ಅರಸು ಕುಟುಂಬಗಳಿಗೆ ಮಾತ್ರ ಸದಸ್ಯತ್ವ ಸೀಮಿತವಾಗಿರುತ್ತದೆ. | **ಸ್ಪಷ್ಟಪಡಿಸಿದೆ.** |
| 5) | **ಸದಸ್ಯತ್ವ :**<br><br>ಆ) ಅರ್ಜಿ ಶುಲ್ಕ ರೂ.50/– ಪಾವತಿ ಮಾಡಿ ಸದಸ್ಯತ್ವ ಅರ್ಜಿಯನ್ನು ಪಡೆದು, ಸಂಘದ ಒಬ್ಬ ಸದಸ್ಯ ಮತ್ತು ಒಬ್ಬ ಆಡಳಿತ ಸಮಿತಿಯ ನಿರ್ದೇಶಕರ ಶಿಫಾರಿಸಿನೊಡನೆ ಭರ್ತಿ ಮಾಡಿದ ಅರ್ಜಿಯನ್ನು ಸಂಘಕ್ಕೆ ಸಲ್ಲಿಸುವುದು. | 5) | **ಸದಸ್ಯತ್ವ :**<br><br>**ಅ) ಬದಲಾವಣೆ ಇಲ್ಲ.**<br><br>ಆ) ಅರ್ಜಿ ಶುಲ್ಕ ರೂ.100/– ಪಾವತಿ ಮಾಡಿ ಸದಸ್ಯತ್ವ ಅರ್ಜಿಯನ್ನು ಪಡೆದು ಸಂಘದ ಒಬ್ಬ ಪ್ರತಿಪಾಧಕ ಸದಸ್ಯ ಮತ್ತು ಒಬ್ಬ ಆಡಳಿತ ಸಮಿತಿಯ ನಿರ್ದೇಶಕರ ಶಿಫಾರಿಸಿನೊಡನೆ ಭರ್ತಿ ಮಾಡಿದ ಅರ್ಜಿಯನ್ನು ಸಂಘಕ್ಕೆ ಸಲ್ಲಿಸುವುದು.<br><br>**ಇ) ಬದಲಾವಣೆ ಇಲ್ಲ.** | **ಆರ್ಥಿಕ ಸದೃಢತೆಗಾಗಿ** |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | ಈ) ಸದಸ್ಯತ್ವ ಅಂಗೀಕರಿಸಿದ ನಂತರ ಸದಸ್ಯತ್ವ ಮೊಬಲಗು ರೂ.500/-ಗಳನ್ನು ಸ್ವೀಕರಿಸುವುದು. | | ಈ) ಸದಸ್ಯತ್ವ ಅಂಗೀಕರಿಸಿದ ಮಾಹಿತಿ ತಲುಪಿದ ಒಂದು ತಿಂಗಳ ಅವಧಿಯೊಳಗೆ ನಿಗದಿತ ಸದಸ್ಯತ್ವ ಶುಲ್ಕವನ್ನು ಭರಿಸತಕ್ಕದ್ದು. | **ಸ್ಪಷ್ಟಪಡಿಸಿದೆ.** |
| | | | **ಉ) ಬದಲಾವಣೆ ಇಲ್ಲ.** | |
| | **ವಿವರಣೆ :** | | **ತೆಗೆದಿದೆ.** | **(4ಔರಲ್ಲಿ) ಸ್ಪಷ್ಟಪಡಿಸಿ ರುವುದರಿಂದ.** |
| | **ಹೊಸ ಸೇರ್ಪಡೆ** | | ಊ) ಸದಸ್ಯತ್ವ ಅಂಗೀಕರಿಸಿದ ನಂತರ ಗುರುತಿನ ಚೀಟಿಯನ್ನು ಮೂರು ತಿಂಗಳೊಳಗೆ ವಿತರಿಸತಕ್ಕದ್ದು. | |
| | | | **ಋ) ಗೌರವ ಸದಸ್ಯತ್ವ :-** ಪ್ರತಿಷ್ಠಿತ ಸಾಧಕರು, ರಾಜ್ಯಮಟ್ಟ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡ ಅರಸು ಜನಾಂಗದ ಮಹನೀಯರಿಗೆ ಆಡಳಿತ ಮಂಡಳಿಯ ಸಮ್ಮತಿಯ ಮೇರೆಗೆ ಸದಸ್ಯತ್ವ ನೀಡುವುದು. | |
| 6) | **ಸದಸ್ಯತ್ವ ಶುಲ್ಕ:-** ಅಜೀವ ಸದಸ್ಯರು ಸದಸ್ಯತ್ವದ ಮೊಬಲಗು ರೂ.500/-ಅರ್ಜಿ ಶುಲ್ಕ ರೂ.50/- | 6) | **ಸದಸ್ಯತ್ವ ಶುಲ್ಕ:-**ಅಜೀವ ಸದಸ್ಯರು ಶುಲ್ಕ ರೂ. 1,000/- ಅರಸು ಜನಾಂಗಕ್ಕೆ ಸೇರಿದ ಅನಿವಾಸಿ ಭಾರತೀಯರು ರೂ.5,000/- ಅರ್ಜಿ ಶುಲ್ಕ ರೂ.100/- ಪರಂತು ಅರಸು ಕುಟುಂಬದ ದಿವ್ಯಾಂಗರು ಮತ್ತು ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ / ನಿವೃತ್ತಿ ಹೊಂದಿದವರಿಗೆ ಸದಸ್ಯತ್ವ ಶುಲ್ಕ ವಿನಾಯಿತಿ ನೀಡಲಾಗಿದೆ. | **ಆರ್ಥಿಕ ಸದೃಢತೆಗಾಗಿ** |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| 7) | **ಸಂಘದ ಉದ್ದೇಶಗಳಿಗೆ ದೇಣಿಗೆ/ ವಂತಿಗೆ ನೀಡುವವರ ವರ್ಗೀಕರಣ :**<br>ಸಂಘದ ಸದಸ್ಯರು ಮತ್ತು ಸದಸ್ಯೇತರ ಅರಸು ಜನಾಂಗದ ದಾನಿಗಳು ನಿರ್ದಿಷ್ಟ ಉದ್ದೇಶಗಳಿಗೆ ನೀಡುವ ವಂತಿಕೆಗೆ ಅನುಗುಣವಾಗಿ ಈ ಕೆಳಕಂಡಂತೆ ಅವರ ಸ್ಥಾನ ಮಾನಗಳನ್ನು ವರ್ಗೀಕರಣ ಮಾಡುವುದು. | 7) | **ಸಂಘದ ಉದ್ದೇಶಗಳಿಗೆ ದೇಣಿಗೆ ವಂತಿಗೆ ನೀಡುವವರ ವರ್ಗೀಕರಣ:**<br>ಸಂಘದ ಸದಸ್ಯರು ಮತ್ತು ಸದಸ್ಯೇತರ ಅರಸು ಜನಾಂಗದ ದಾನಿಗಳು ನಿರ್ದಿಷ್ಟ ಉದ್ದೇಶಗಳಿಗೆ ನೀಡುವ ವಂತಿಕೆಗೆ ಅನುಗುಣವಾಗಿ ಈ ಕೆಳಕಂಡಂತೆ ಅವರ ಸ್ಥಾನಮಾನಗಳನ್ನು ವರ್ಗೀಕರಣ ಮಾಡುವುದು. | |
| | | | **ಅ) ಬದಲಾವಣೆ ಇಲ್ಲ.** | |
| | ಆ) **ಪೋಷಕರು:**ರೂ.10,000/– ಮತ್ತು ಅದಕ್ಕಿಂತ ಮೇಲ್ಪಟ್ಟು ನೀಡುವವರು. | | ಆ) **ಪೋಷಕರು:**ರೂ. 25,000/– ಮತ್ತು ಅದಕ್ಕಿಂತ ಮೇಲ್ಪಟ್ಟು ವಂತಿಗೆ ನೀಡುವವರು. | **ಆರ್ಥಿಕ ಸದೃಢತೆಗಾಗಿ** |
| 8) | **ಸದಸ್ಯರ ಹಕ್ಕು ಮತ್ತು ಹೊಣೆಗಾರಿಕೆಗಳು** | 8) | **ಸದಸ್ಯರ ಹಕ್ಕು ಮತ್ತು ಹೊಣೆಗಾರಿಕೆಗಳು**<br>**ಅ) ಮತ್ತು ಆ) ಬದಲಾವಣೆ ಇಲ್ಲ.** | |
| | ಇ) ಸಂಘವು ಕಾಲಕಾಲಕ್ಕೆ, ಆಚರಿಸುವ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಕಾರ್ಯಕ್ರಮಗಳ ಹಾಗೂ ಅರಸು ಜನಾಂಗಕ್ಕೆ ಸಂಬಂಧಿಸಿದ ಧಾರ್ಮಿಕ ಹಬ್ಬಗಳ ಅಚರಣೆಯಲ್ಲಿ ಸಕ್ರೀಯವಾಗಿ ಸದಸ್ಯರುಗಳು ಪಾಲ್ಗೊಳ್ಳುವುದು. | | ಇ) ಸಂಘವು ಕಾಲಕಾಲಕ್ಕೆ, ಆಚರಿಸುವ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಕಾರ್ಯಕ್ರಮಗಳ ಹಾಗೂ ಅರಸು ಜನಾಂಗಕ್ಕೆ ಸಂಬಂಧಿಸಿದ ಧಾರ್ಮಿಕ ಹಾಗೂ **ಸಾಂಸ್ಕೃತಿಕ** ಕಾರ್ಯಕ್ರಮಗಳ ಅಚರಣೆಯಲ್ಲಿ ಸಕ್ರೀಯವಾಗಿ ಸದಸ್ಯರುಗಳು ಪಾಲ್ಗೊಳ್ಳುವುದು. | ಸ್ಪಷ್ಟಪಡಿಸಿದೆ. |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | ಈ)ವಾರ್ಷಿಕ ಮಹಾ ಸಭೆಯಲ್ಲಿ/ ವಿಶೇಷ ಮಹಾಸಭೆಯಲ್ಲಿ ಮಂಡಿಸುವ ಸಂಘದ ವಾರ್ಷಿಕ ವರದಿಯನ್ನು ಮತ್ತು ಆರ್ಥಿಕ ತಃಖ್ತೆಗಳನ್ನು ಹಾಗೂ ಲೆಕ್ಕ ತಪಾಸಿಗರ ವರದಿಯನ್ನು ಸೂಕ್ಷ್ಮವಾಗಿ ಗಮನಿಸಿ ಚರ್ಚಿಸಿ ನಂತರ ಸೂಕ್ತ ತೀರ್ಮಾನ ಕೈಗೊಳ್ಳುವುದು. | | ಈ)ವಾರ್ಷಿಕ ಮಹಾ ಸಭೆಯಲ್ಲಿ/ ವಿಶೇಷ ಮಹಾಸಭೆಯಲ್ಲಿ ಮಂಡಿಸುವ ಸಂಘದ ವಾರ್ಷಿಕ ವರದಿಯನ್ನು ಮತ್ತು ಆರ್ಥಿಕ ತಃಖ್ತೆಗಳನ್ನು ಹಾಗೂ ಲೆಕ್ಕ ತಪಾಸಿಗರ ವರದಿಯನ್ನು ಸೂಕ್ಷ್ಮವಾಗಿ ಗಮನಿಸಿ ಚರ್ಚಿಸಲು ಇಚ್ಚಿಸಿದ್ದಲ್ಲಿ ತಾವು ಚರ್ಚಿಸುವ ವಿಷಯವನ್ನು ವಾರ್ಷಿಕ ಸರ್ವಸದಸ್ಯರ ಸಭೆಯ 7 ದಿನಗಳ ಮುಂಚಿತವಾಗಿ ಅಧ್ಯಕ್ಷರು/ ಕಾರ್ಯದರ್ಶಿಗಳಿಗೆ ಸಂಘದ ವಿಳಾಸಕ್ಕೆ ಲಿಖಿತ ರೂಪದಲ್ಲಿ ಸಲ್ಲಿಸಿದಲ್ಲಿ ಅವುಗಳ ಕುರಿತು ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳುವುದು.<br><br>**ಉ) ಇಂದ ಋ) ವರೆಗೆ ಬದಲಾವಣೆ ಇಲ್ಲ.** | |
| 9) | **ಸದಸ್ಯತ್ವರದ್ದಾಗುವುದು :**<br>ಈ ಕೆಳಕಂಡ ಕಾರಣಗಳಿಂದಾಗಿ ಸಂಘದ ಸದಸ್ಯತ್ವವನ್ನು ಕಳೆದುಕೊಳ್ಳುವರು.<br><br>**ಹೊಸ ಸೇರ್ಪಡೆ** | 9) | **ಸದಸ್ಯತ್ವರದ್ದಾಗುವುದು :**<br>ಈ ಕೆಳಕಂಡ ಕಾರಣಗಳಿಂದಾಗಿ ಸಂಘದ ಸದಸ್ಯತ್ವವನ್ನು ಕಳೆದುಕೊಳ್ಳುವರು.<br><br>**ಅ) ಇಂದ ಊ)ವರೆಗೆ ಬದಲಾವಣೆ ಇಲ್ಲ.**<br><br>ಋ) ಯಾವುದೇ ಸದಸ್ಯರ (ಸಂಘದ ಹಾಗೂ ಸಮುದಾಯದ) ಮೇಲಿನ ಆರೋಪಗಳು ಸಾಬೀತಾಗಿ ಮಹಾ ಸಭೆಯಲ್ಲಿ ಗೊತ್ತುವಳಿಯಾದಾಗ. | ಸ್ಪಷ್ಟಪಡಿಸಿದೆ. |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | **ಹೊಸ ಸೇರ್ಪಡೆ** | | ಎ)ಯಾವುದೇ ವಿಧದ ಸದಸ್ಯರುಗಳು ಸಂಘದ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದಲ್ಲಿ ಅದನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಕಾರ್ಯಕಾರಿ ಸಮಿತಿಗೆ ಇರತಕ್ಕದ್ದು. | |
| 10) | **ಸಂಘದ ಚರ ಮತ್ತು ಸ್ಥಿರ ಆಸ್ತಿಗಳು:** | 10) | **ಸಂಘದ ಚರ ಮತ್ತು ಸ್ಥಿರ ಆಸ್ತಿಗಳು : ಅ) ಇಂದ ಇ) ವರೆಗೆ ಬದಲಾವಣೆ ಇಲ್ಲ.** | |
| 11) | **ಮಾಸಿಕ ಸಭೆ :** | 11) | **ಮಾಸಿಕ ಸಭೆ :**<br>**ಬದಲಾವಣೆ ಇಲ್ಲ** | |
| | **ನಿರ್ದಿಷ್ಟ ಸಂಖ್ಯೆ (ಕೋರಂ)**<br>ಮಾಸಿಕ ಸಭೆಗೆ ಕನಿಷ್ಠ 5 ಜನ ಸದಸ್ಯರು ಹಾಜರಿರತಕ್ಕದ್ದು, ಕೋರಂ ಕೊರತೆ ಇದ್ದಾಗ ಸಭೆಯನ್ನು 60 ನಿಮಿಷಗಳ ಕಾಲ ಮುಂದೂಡಿ ನಂತರ ಸಭೆಯನ್ನು ನಡೆಸುವುದು. | | **ನಿರ್ದಿಷ್ಟ ಸಂಖ್ಯೆ (ಕೋರಂ)**<br>ಮಾಸಿಕ ಸಭೆಗೆ ಕನಿಷ್ಠ **8** ಜನ ಸದಸ್ಯರು ಹಾಜರಿರತಕ್ಕದ್ದು, ಕೋರಂ ಕೊರತೆ ಇದ್ದಾಗ ಸಭೆಯನ್ನು **30** ನಿಮಿಷಗಳ ಕಾಲ ಮುಂದೂಡಿ ನಂತರ ಸಭೆಯನ್ನು ನಡೆಸುವುದು. ಮುಂದೂಡಿದ ಸಭೆಗೆ ಕೋರಂನ ಅವಶ್ಯಕತೆ ಇರುವುದಿಲ್ಲ. | ಸ್ಪಷ್ಟಪಡಿಸಿದೆ. |
| 12) | **ಮಹಾಸಭೆ :**<br>ಅ)ವಾರ್ಷಿಕ ಮಹಾಸಭೆಯನ್ನು ಪ್ರತಿ ವರ್ಷಕ್ಕೊಮ್ಮೆ ಸೆಪ್ಟೆಂಬರ್ 27 ರ ಒಳಗೆ ತಪ್ಪದೆ ಕೇಂದ್ರ ಸ್ಥಾನದಲ್ಲಿ ವಾರ್ಷಿಕ ಮಹಾಸಭೆ ನಡೆಯುವ ದಿನಾಂಕ ವೇಳೆ ಸ್ಥಳ ಮತ್ತು ಚರ್ಚಿಸತಕ್ಕ ವಿಷಯಗಳನ್ನು ನಮೂದಿಸಿ | 12) | **ವಾರ್ಷಿಕ ಮಹಾಸಭೆ :**<br>ಅ) ವಾರ್ಷಿಕ ಮಹಾ ಸಭೆಯನ್ನು ಹಣಕಾಸು ವರ್ಷದ ಅವಧಿ ಮುಗಿದ ಒಂಭತ್ತು ತಿಂಗಳೊಳಗಾಗಿ ನಡೆಸತಕ್ಕದ್ದು. ಇಂತಹ ಸಭೆಯನ್ನು ಕೇಂದ್ರ ಸ್ಥಾನದಲ್ಲಿ ವಾರ್ಷಿಕ ಮಹಾಸಭೆ ನಡೆಯುವ ದಿನಾಂಕ ವೇಳೆ ಸ್ಥಳ | |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | ಸಭೆಗೆ 21 ದಿನಗಳ ಮುಂಚಿತವಾಗಿ ಸಂಘದ ಎಲ್ಲಾ ಸದಸ್ಯರುಗಳಿಗೆ ಸಭಾ ಸೂಚನಾ ಪತ್ರವನ್ನು ವೆಚ್ಚಭರಿಸಲಾದ ಅಂಚೆಯ ಮೂಲಕ ನೀಡಿ ಸಭೆಯನ್ನು ನಡೆಸುವುದು. | | ಮತ್ತು ಚರ್ಚಿಸತಕ್ಕ ವಿಷಯಗಳನ್ನು ನಮೂದಿಸಿ ಸಭೆಗೆ 15 ದಿನಗಳ ಮುಂಚಿತವಾಗಿ ಸಂಘದ ಎಲ್ಲಾ ಸದಸ್ಯರುಗಳಿಗ ಸಭಾ ಸೂಚನಾ ಪತ್ರವನ್ನು ವೆಚ್ಚಭರಿಸಲಾದ ಅಂಚೆ/ ಇ–ಮೇಲ್/ಕೊರಿಯರ್/ ಮುದ್ದಾಂ/ ಎಲೆಕ್ಟ್ರಾನಿಕ್ ಮಾದ್ಯಮದ ಮೂಲಕ ನೀಡಿ ಸಭೆಯನ್ನು ನಡೆಸುವುದು. | |
| | ಆ) ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ಮತ್ತು ಸಂಘದ ನಿಭಂಧನೆ ಗೊಳಗಿದ್ದ ಸಾಮಾನ್ಯ ಸಭೆಯು ಪರಮೋಚ್ಚಾಧಿಕಾರವನ್ನು ಹೊಂದಿರುತ್ತದೆ. | | ಆ) ಸಂಘದ ಎಲ್ಲಾ ಆಡಳಿತ ವಿಷಯಗಳಿಗೆ ಸಂಬಂಧಿಸಿದ ಮತ್ತು ಅದರ ಎಲ್ಲಾ ಆಗುಹೋಗುಗಳ ಅಂತಿಮ ಅಧಿಕಾರವು ಸರ್ವ ಸದಸ್ಯರ ಸಭೆಗೆ ಇರುತ್ತದೆ. | |
| | ಇ)ಈ ಮಹಾಸಭೆಗಳನ್ನು ನಡೆಸಲು 101 ಸದಸ್ಯರ ಹಾಜರಾತಿಯು ಕೋರಂ ಇರಬೇಕು ತಪ್ಪಿದಲ್ಲಿ ಆ ಸಭೆಯನ್ನು 30 ನಿಮಿಷಗಳ ಕಾಲ ಮುಂದೂಡಬೇಕು, ಮೂಂದೂಡಿದ ಸಭೆಯಲ್ಲಿ ನಿಗಧಿತ ಕೋರಂ ಇಲ್ಲದ್ದಿರೂ ಸಭೆಯನ್ನು ನಡೆಸಿ ತೀರ್ಮಾನಕೈಗೊಂಡು ಸುಸಂಪನ್ನಗೊಳಿಸುವುದು. | | ಇ) ಈ ಮಹಾಸಭೆಗಳನ್ನು ನಡೆಸಲು 1/3 ಸದಸ್ಯರ ಹಾಜರಾತಿಯು ಕೋರಂ ಇರಬೇಕು ತಪ್ಪಿದಲ್ಲಿ ಆ ಸಭೆಯನ್ನು 30ನಿಮಿಷಗಳ ಕಾಲ ಮೂಂದೂಡಬೇಕು, ಮೂಂದೂಡಿದ ಸಭೆಯಲ್ಲಿ ನಿಗಧಿತ ಕೋರಂ ಇಲ್ಲದ್ದಿರೂ ಸಭೆಯನ್ನು ನಡೆಸಿ ತೀರ್ಮಾನ ಕೈಗೊಂಡು ಸುಸಂಪನ್ನ ಗೊಳಿಸುವುದು. | |
| | **ಹೊಸ ಸೇರ್ಪಡೆ :** | | ಈ)ಸಂಘದ ಧ್ಯೇಯೋದ್ದೇಶಗಳ ಈಡೇರಿಕೆಗಾಗಿ ಟ್ರಸ್ಟ್‌ನ್ನು ನೋಂದಾಯಿಸಲು ಅನುಮತಿ | **ವಾರ್ಷಿಕ ಮಹಾಸಭೆಯ ಅಧಿಕಾರ ವಿಸ್ತರಿಸಲು** |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | | | ನೀಡುವ ಅಧಿಕಾರವು ಸರ್ವಸದಸ್ಯರ ಸಭೆಗೆ ಇರುತ್ತದೆ. ಇದರ ರಚನೆಗೆ ಪ್ರತ್ಯೇಕವಾದ ಟ್ರಸ್ಟ್ ಡೀಡನ್ನು ಇಂಡಿಯನ್ ಟ್ರಸ್ಟ್ಸ್ ಆಕ್ಟ್ 1882ರಂತೆ ಸಕ್ಷಮ ಪ್ರಾಧಿಕಾರದಲ್ಲಿ ನೋಂದಾಯಿಸಲು ಕಾರ್ಯಕಾರಿ ಸಮಿತಿಗೆ ಅಧಿಕಾರ ನೀಡುವುದು. ಈ ರೀತಿ ರಚಿಸಿದ ಟ್ರಸ್ಟ್ ಡೀಡ್ ಸಂಘದ ನಿಯಮ ಮತ್ತು ನಿಬಂಧನೆಗಳಿಗೆ ವಿರೋಧವಾಗಿರತಕ್ಕದ್ದಲ್ಲ. | |
| | **ಹೊಸ ಸೇರ್ಪಡೆ :** | | ಉ) ಸರ್ವಸದಸ್ಯರ ಸಭೆ ಒಪ್ಪಿಗೆ ಇಲ್ಲದೇ ಸಂಘದ ಸ್ಥಿರಾಸ್ತಿಯನ್ನು ಕ್ರಯ, ಆಧಾರ, ಭೋಗ್ಯ ವಿಶೇಷ ಅಧಿಕಾರ ಪತ್ರಗಳು ಯಾವುದೇ ರೀತಿಯ ಹಕ್ಕುಗಳು ಮುಂತಾದವುಗಳನ್ನು ಮಾಡತಕ್ಕದ್ದಲ್ಲ. | **ಅಸೋಸಿಯೇಷನ್‌ನ ಹಿತದೃಷ್ಟಿಯಿಂದ** |
| | **ಈ ಕೆಳಗಿನ ವಿಷಯುಗಳನ್ನು ಸಭೆಯಲ್ಲಿ ಮಂಡಿಸಿ ತೀರ್ಮಾನ ಕೈಗೊಳ್ಳುವುದು:–** | | **ಈ ಕೆಳಗಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಿ ತೀರ್ಮಾನ ಕೈಗೊಳ್ಳುವುದು:–**<br>**ಅ) ಬದಲಾವಣೆ ಇಲ್ಲ.** | |
| | ಆ) ಹಿಂದಿನ ವರ್ಷದ ವಾರ್ಷಿಕ ಮಹಾಸಭೆಯ ನಡವಳಿಕೆಗಳನ್ನು ಹಾಗೂ ಆಡಳಿತ ಸಮಿತಿಯ ಕೈಗೊಂಡ ಕ್ರಮಗಳ ಬಗ್ಗೆ ಚರ್ಚಿಸಿ ದಾಖಲಿಸುವುದು. | | ಆ) ಹಿಂದಿನ ವಾರ್ಷಿಕ/ವಿಶೇಷ ಸದಸ್ಯರ ಸಭೆಯ ನಡವಳಿಗಳನ್ನು ಓದಿ ದಾಖಲಿಸುವುದು.<br>**ಇ) ಇಂದ ಊ) ವರೆಗೆ ಬದಲಾವಣೆ ಇಲ್ಲ.** | |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | **ಹೊಸ ಸೇರ್ಪಡೆ :** | | ಋ) ವಾರ್ಷಿಕ ಆಯವ್ಯಯವನ್ನು ಚರ್ಚಿಸಿ ಅನುಮೋದಿಸುವುದು.<br><br>ಎ) ಲೆಕ್ಕಪರಿಶೋಧಕರ ನೇಮಕಾತಿ ಮತ್ತು ಅವರ ಸಂಭಾವನೆ ನಿಗಧಿಗೊಳಿಸುವುದು.<br><br>ಏ) ಕಾರ್ಯಕಾರಿ ಸಮಿತಿಯ ಚುನಾವಣೆ ಇದ್ದಲ್ಲಿ ನಡೆಸುವುದು.<br><br>ಐ) ಸಂಘದ ಯಾವುದೇ ಸದಸ್ಯರು ಸಂಘದ ನಿಯಮ ಮತ್ತು ನಿಬಂಧನೆಗಳು ಹಾಗೂ ಬೈಲಾಗಳ ಉಲ್ಲಂಘನೆ ಅಥವಾ ಸಂಘದ ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸಿದ್ದಲ್ಲಿ ಅಂತವರ ಕೃತ್ಯಗಳಿಗಾಗಿ ಅಂತಹ ಸದಸ್ಯರ ವಿರುದ್ಧ ಶಿಸ್ತಿನ ಕ್ರಮಕೈಗೊಳ್ಳುವುದು.<br><br>ಒ) ಸಂಘದ ಚಟುವಟಿಕೆಗಳಿಂದ ಉದ್ಭವಿಸುವ ಸಾಮಾನ್ಯ ಸ್ವತ್ತುಗಳು ಸಾಮಾನ್ಯ ಹಕ್ಕುಗಳು ಅಥವಾ ವಿಷಯಗಳು ಇವುಗಳ ಬಗ್ಗೆ ಅವಶ್ಯಕವೆನಿಸುವ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವುದು.<br><br>ಓ) ವಿಚಾರಣಾ ವರದಿ ಯಾವುದಾದರೂ ಇದ್ದರೆ ಅದರ ಪರಿಶೀಲನೆ. | **ಮಹಾಸಭೆಯ ಅಧಿಕಾರವನ್ನು ವಿಸ್ತರಿಸಿದೆ.** |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | **ಹೊಸ ಸೇರ್ಪಡೆ** | | ಔ) ಸಂಘದ ಕಾರ್ಯ ಚಟುವಟಿಕೆಗಳಲ್ಲಿ/ಕಾರ್ಯಾಚರಣೆಯಲ್ಲಿ ಕೊರತೆ ಏನಾದರೂ ಇದ್ದರೆ ಅದರ ಪುನರ್ ಅವಲೋಕನ ಮತ್ತು ಅಂತಹ ಕೊರತೆಯನ್ನು ಸರಿದೂಗಿಸಲು ಕಾರ್ಯಕ್ರಮ ರೂಪಿಸುವುದು.<br><br>ಅಂ) ಮುಂಬರುವ ವರ್ಷಕ್ಕೆ ಕಾರ್ಯಕಾರಿ ಸಮಿತಿಯವರು ತಯಾರಿಸಿದ ಸಂಘದ ಚಟುವಟಿಕೆಗಳ ಕಾರ್ಯಕ್ರಮದ ಅನುಮೋದನೆ.<br><br>ಅಃ) ಸಂಘದ ಕಾರ್ಯಕಾರಿ ಸಮಿತಿಯವರು ಸದಸ್ಯತ್ವ ತೆಗೆದು ಹಾಕಿದ ಹಾಗೂ ಸದಸ್ಯತ್ವ ಸೇರ್ಪಡೆ ಮಾಡಿಕೊಂಡ ಬಗ್ಗೆ ಗೊಂದಲಗಳು/ ಮನವಿಗಳು ಇದ್ದಲ್ಲಿ ಅವುಗಳನ್ನು ಅವಲೋಕಿಸುವುದು.<br><br>ಅಅ) ಸಂಘದ ಕಾರ್ಯ ಕಲಾಪಗಳ ಕುರಿತು ಹಾಗೂ ಇನ್ನಿತರೆ ವಿಷಯಗಳನ್ನು ಸಭೆಯಲ್ಲಿ ಮಾತನಾಡಬೇಕಾಗಿರುವ ಸದಸ್ಯರು ವಾರ್ಷಿಕ ಸಭೆ ನಿಗಧಿತವಾಗಿರುವ ದಿವಸಕ್ಕೆ ಕನಿಷ್ಟ ಪಕ್ಷ 07 ದಿನಗಳಿಗೆ ಕಡಿಮೆ ಇಲ್ಲದಂತೆ ಅಧ್ಯಕ್ಷರಿಗೆ ವಿಳಾಸಿಸಿ ಸ್ಪಷ್ಟವಾಗಿ ವಿಷಯವನ್ನು ನಮೂದಿಸಿ ಪತ್ರ ಬರೆದಿರತಕ್ಕದ್ದು. | **ಮಹಾಸಭೆಯ ಅಧಿಕಾರವನ್ನು ವಿಸ್ತರಿಸಿದೆ.** |
| 13) | **ವಿಶೇಷ ಮಹಾಸಭೆ :**<br>ವಿಶೇಷ ಮಹಾಸಭೆಯನ್ನು ಯಾವುದೇ ಸಮಯದಲ್ಲಿ ಆಡಳಿತ ಸಮಿತಿ ಅಥವಾ | 13) | **ವಿಶೇಷ ಮಹಾಸಭೆ :**<br>ಅ) ವಿಶೇಷ ಸರ್ವಸದಸ್ಯರ ಸಭೆಯನ್ನು ಸಂಘದ ಅಧ್ಯಕ್ಷರು ಅಥವಾ, 1/3 ಕಾರ್ಯಕಾರಿ ಸಮಿತಿ ಸದಸ್ಯರುಗಳು | **ಕ.ಸಂ.ನೊಂ. ಕಾಯ್ದೆ ಕಲಂ 11(3) ರಂತೆ ಸ್ಪಷ್ಟಪಡಿಸಿದೆ.** |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | ಮತದಾನದ ಹಕ್ಕುಳ್ಳ ಒಟ್ಟು 10ನೇ 1 ಭಾಗದಷ್ಟು ಸಾಮಾನ್ಯ ಸದಸ್ಯರ ಕೋರಿಕೆಯ ಮೇರೆಗೆ, ಕೋರಿಕೆ ಸಲ್ಲಿಸಿದ 15 ದಿನಗಳೊಳಗಾಗಿ ನಿರ್ದಿಷ್ಟ ಪಡಿಸಿದ ವಿಷಯಗಳ ಚರ್ಚೆ ಮತ್ತು ತೀರ್ಮಾನಕ್ಕಾಗಿ ಸಭೆ ನಡೆಸುವ ದಿನಾಂಕ ಸ್ಥಳ ವೇಳೆ ಮತ್ತು ಚರ್ಚಿಸತಕ್ಕ ವಿಷಯಗಳನ್ನು ನಮೂದಿಸಿ ಸದಸ್ಯರುಗಳಿಗೆ ಕನಿಷ್ಠ 7 ದಿವಸಗಳ ತಿಳುವಳಿಕೆ ನೀಡಿ ವಿಶೇಷ ಮಹಾ ಸಭೆಯನ್ನು ಏರ್ಪಡಿಸಿ ಕಾರ್ಯ ಸೂಚಿಯ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಈ ಮಹಾಸಭೆಗಳನ್ನು ನಡೆಸಲು 101 ಸದಸ್ಯರ ಹಾಜರಾತಿಯ ಕೋರಂ ಇರಬೇಕು ತಪ್ಪಿದಲ್ಲಿ ಆ ಸಭೆಯನ್ನು 30 ನಿಮಿಷಗಳ ಕಾಲ ಮುಂದೂಡಬೇಕು. ಮುಂದೂಡಿದ ಸಭೆಯಲ್ಲಿ ನಿಗಧಿತ ಕೋರಂ ಇಲ್ಲದ್ದಿದ್ದರೂ ಸಭೆಯನ್ನು ನಡೆಸಿ ತೀರ್ಮಾನಕೈಗೊಂಡು ಸುಸಂಪನ್ನಗೊಳಿಸುವುದು. | | ಅವಶ್ಯಕವೆನಿಸಿದಾಗ ಅಂತಹ ಸಂದರ್ಭದಲ್ಲಿ ಅಥವಾ ಸಂಘದ 1/10 ಹೆಚ್ಚು ಸದಸ್ಯರು ಲಿಖಿತ ರೂಪದಲ್ಲಿ ನೀಡಿದ ನೋಟೀಸ್ ಸ್ವೀಕರಿಸಿದ ನಂತರ ಸಭೆಗೆ ಕಾರಣವನ್ನು ಕೊಟ್ಟು ಮತ್ತು ಆ ಸಭೆಯಲ್ಲಿ ಪರಿಶೀಲಿಸುವ ವಿಷಯಗಳನ್ನು ಮುಂದಿಟ್ಟು ಸಭೆಯನ್ನು ಕರೆಯತಕ್ಕದ್ದು. ಅಂತಹ ನೋಟೀಸ್ ತಲುಪಿದ 40 ದಿನಗಳ ಒಳಗೆ ಕಡ್ಡಾಯವಾಗಿ ಎಲ್ಲಾ ಸದಸ್ಯರುಗಳಿಗೆ 21 ದಿನ ಮುಂಚಿತವಾಗಿ ನೋಟಿಸನ್ನು ನೀಡಿ ಸಭೆಯನ್ನು ಅಧ್ಯಕ್ಷರು ಅಥವಾ ಅವರ ಗೈರುಹಾಜರಿಯಲ್ಲಿ ಕಾರ್ಯದರ್ಶಿಗಳು ಕರೆಯತಕ್ಕದ್ದು. ಈ ಮಹಾಸಭೆಗಳನ್ನು ನಡೆಸಲು 1/3 ಸದಸ್ಯರ ಹಾಜರಾತಿಯ ಕೋರಂ ಇರಬೇಕು ತಪ್ಪಿದಲ್ಲಿ ಆ ಸಭೆಯನ್ನು 30ನಿಮಿಷಗಳ ಕಾಲ ಮೂಂದೂಡಬೇಕು, ಮೂಂದೂಡಿದ ಸಭೆಯಲ್ಲಿ ನಿಗಧಿತ ಕೋರಂ ಇಲ್ಲದ್ದಿರೂ ಸಭೆಯನ್ನು ನಡೆಸಿ ತೀರ್ಮಾನ ಕೈಗೊಂಡು ಸುಸಂಪನ್ನಗೊಳಿಸುವುದು. ಸದಸ್ಯರ ಕೋರಿಕೆ ಮೇರೆಗೆ ಕರೆದ ಸಭೆಗೆ ಕೋರಂ ಇಲ್ಲದಿದ್ದಲ್ಲಿ ಅಂತಹ ಸಭೆಯನ್ನು ವಿಸರ್ಜಿಸುವುದು. | **ಕ.ಸಂ.ನೊಂ. ಕಾಯ್ದೆ ಕಲಂ 11(3) ರಂತೆ ಸ್ಪಷ್ಟಪಡಿಸಿದೆ.** |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | **ಹೊಸ ಸೇರ್ಪಡೆ** | | ಆ) ಸಂಘದ ಧ್ಯೇಯೋದ್ದೇಶಗಳ, ನಿಯಮ ನಿಬಂಧನೆಗಳ ತಿದ್ದುಪಡಿಯನ್ನು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ ಕಲಂ 9 ಮತ್ತು 10ರನ್ವಯ ವಿಶೇಷ ಸರ್ವಸದಸ್ಯರ ಸಭೆಯಲ್ಲಿ ಅನುಮೋದನೆಗೆ ಮಂಡಿಸುವುದು. ವಿಶೇಷ ಸರ್ವಸದಸ್ಯರ ಅನುಮೋದನೆಯಾದ ನಂತರ ನೊಂದಣಾಧಿಕಾರಿಗಳಿಂದ ನೊಂದಣಿ ಯಾದರೆ ಮಾತ್ರ ಜಾರಿಗೆ ಬರುತ್ತದೆ. | **ಕ.ಸಂ.ನೊಂ. ಕಾಯ್ದೆ ಕಲಂ 11(3) ರಂತೆ ಸ್ಪಷ್ಟಪಡಿಸಿದೆ.** |
| | | | ಇ) **ಸಭೆಯ ನಿರ್ಧಾರಗಳು :–** ಸಂಘದ ಸರ್ವ ಸದಸ್ಯರ ಸಭೆ/ ವಿಶೇಷ ಸರ್ವ ಸದಸ್ಯರ ಸಭೆಗಳಲ್ಲಿ ಉದ್ಭವಿಸುವ ಪ್ರಶ್ನೆಗಳನ್ನು ಸಂಘದ ಅಧ್ಯಕ್ಷರು ಅಥವಾ ಅವರಿಂದ ಅಧಿಕಾರ ಹೊಂದಲ್ಪಟ್ಟ ಪ್ರತಿನಿಧಿಗಳು ಹಾಜರಿದ್ದು, ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಲ್ಲಿ ಕೈ ಎತ್ತುವ ಮೂಲಕ ತೀರ್ಮಾನಿಸುವುದು. ಪ್ರತಿ ಸದಸ್ಯರಿಗೂ ಒಂದೊಂದೇ ಮತವನ್ನು ಚಲಾಯಿಸುವ ಹಕ್ಕಿರುತ್ತದೆ, ಚಲಾಯಿಸಿದ ಮತಗಳು ಸಮಾವಾಗಿದ್ದಲ್ಲಿ (ಡ್ರಾ ಆದಲ್ಲಿ) ಚುನಾವಣೆ ಹೊರತುಪಡಿಸಿ ಸಂಘದ ಅಧ್ಯಕ್ಷರಿಗೆ ಒಂದು ನಿರ್ಣಾಯಕ ಮತ ಚಲಾಯಿಸುವ ಹಕ್ಕಿರುತ್ತದೆ. | **ಸ್ಪಷ್ಟಪಡಿಸಿದೆ.** |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| 14) | **ಆಡಳಿತಸಮಿತಿ/ಕಾರ್ಯಕಾರಿ ಸಮಿತಿ ರಚನೆ:** | 14) | **ಆಡಳಿತ ಸಮಿತಿ/ಕಾರ್ಯಕಾರಿ ಸಮಿತಿ ರಚನೆ:**<br><br>**ಅ) ಇಂದ ಈ) ವರೆಗೆ ಬದಲಾವಣೆ ಇಲ್ಲ.** | **ಸ್ಪಷ್ಟಪಡಿಸಿದೆ.** |
| | **ಹೊಸ ಸೇರ್ಪಡೆ** | | ಉ) ಯಾರೆ ಕಾರ್ಯಕಾರಿ ಸಮಿತಿ ಸದಸ್ಯರು ಸತತವಾಗಿ ಮೂರು ಸಭೆಗಳಿಗೆ ಗೈರು ಹಾಜರಾದರೆ ಅಂತಹ ಸದಸ್ಯರ ಹೇಳಿಕೆಗೆ ಅವಕಾಶ ನೀಡಿ ಹೇಳಿಕೆ ಸಮಂಜಸವಲ್ಲವೆಂದು ಅಭಿಪ್ರಾಯಪಟ್ಟಲ್ಲಿ ಮಾತ್ರ ಅಂತವರ ಕಾರ್ಯಕಾರಿ ಸಮಿತಿಯು ಸದಸ್ಯತ್ವರದ್ದಾಗುತ್ತದೆ. ಸಮಿತಿಯು ಅಂತಹ ಸದಸ್ಯರ ಗೈರು ಹಾಜರಿಯನ್ನು ಸೂಕ್ತ ಕಾರಣಗಳೊಂದಿಗೆ ಮನ್ನ ಮಾಡುವ ಹಕ್ಕು ಇರುತ್ತದೆ. | |
| 15) | **ಆಡಳಿತ ಸಮಿತಿಯ ಅಧಿಕಾರ ಕರ್ತವ್ಯ ಮತ್ತು ಜವಾಬ್ದಾರಿಗಳು.** | 15) | **ಆಡಳಿತ ಸಮಿತಿಯ ಅಧಿಕಾರ ಕರ್ತವ್ಯ ಮತ್ತು ಜವಾಬ್ದಾರಿಗಳು.**<br><br>**ಅ) ಮತ್ತು ಆ) ರಲ್ಲಿ ಬದಲಾವಣೆ ಇಲ್ಲ.** | |
| | ಇ) ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಅಗತ್ಯವಿದ್ದಷ್ಟು ಖಾತೆಗಳನ್ನು ತೆರೆಯುವುದು ಹಾಗೂ ಸೂಕ್ತ ರೀತಿಯಲ್ಲಿ ಹಣವನ್ನು ತೊಡಗಿಸಿ ವ್ಯವಹರಿಸಲು ವ್ಯವಸ್ಥೆ ಮಾಡುವುದು. | | ಇ) ರಾಷ್ಟ್ರೀಕೃತ, ಖಾಸಗಿ, ಸಹಕಾರ ಬ್ಯಾಂಕುಗಳಲ್ಲಿ ಖಾತೆಗಳನ್ನು ತೆರೆಯುವುದು ಹಾಗೂ ಸೂಕ್ತ ರೀತಿಯಲ್ಲಿ ಹಣವನ್ನು ತೊಡಗಿಸಿ ವ್ಯವಹರಿಸಲು ವ್ಯವಸ್ಥೆ ಮಾಡುವುದು. | **ಸಹಕಾರ ಬ್ಯಾಂಕುಗಳಿಗೆ ಉತ್ತೇಜಿಸಲು** |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | | | **ಈ) ಇಂದ ಅಃ) ವರೆಗೆ ಬದಲಾವಣೆ ಇಲ್ಲ.** | |
| | **ಹೊಸ ಸೇರ್ಪಡೆ** | | ಅಆ) ಸರ್ಕಾರದಿಂದ, ಸಂಘ ಸಂಸ್ಥೆಗಳಿಂದ ಮತ್ತು ವ್ಯಕ್ತಿಗಳಿಂದ ಗ್ರಾಂಟ್ಸ್, ಡೊನೇಷನ್. ಸಬ್‌ಸ್ಕ್ರಿಪ್ಷನ್, ಚರಾಸ್ತಿ, ಸ್ಥಿರಾಸ್ತಿ ಇವುಗಳನ್ನು ಸ್ವೀಕರಿಸಲು ಮತ್ತು ಅವುಗಳನ್ನು ಸಂಘದ ಧ್ಯೇಯೋದ್ದೇಶಗಳಿಗೆ ಬಳಸಿಕೊಳ್ಳತಕ್ಕದ್ದು. | **ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸಲು** |
| | | | ಅಇ) ಜಿಲ್ಲೆ, ತಾಲ್ಲೂಕು, ಹೋಬಳಿ, ಮತ್ತು ವಾರ್ಡ್ ಮಟ್ಟದಲ್ಲಿ ಅವಶ್ಯ ವಿದ್ದಲ್ಲಿ ಶಾಖೆಗಳನ್ನು/ ಘಟಕಗಳನ್ನು ತೆರೆದು ಸಂಘದ ಸದಸ್ಯರುಗಳಿಗೆ ಅನುಕೂಲ ವಾಗುವಂತಹ ಕಾರ್ಯಚಟುವಟಿಕೆ ಗಳನ್ನು ಹಮ್ಮಿಕೊಳ್ಳುವುದು. | |
| | | | ಅಈ) ಸಂಘದ ವತಿಯಿಂದ ಪತ್ರಿಕೆ, ಪುಸ್ತಕ, ಜರ್ನಲ್‌ಗಳನ್ನು ಹೊರಡಿಸುವುದು. | |
| | | | ಅಉ) ಅವಶ್ಯಕವೆನಿಸಿದಲ್ಲಿ ಧ್ಯೇಯೋದ್ದೇಶಗಳಿಗೆ, ನಿಯಮ ನಿಬಂಧನೆಗಳ ಈಡೇರಿಕೆಗಾಗಿ ಅವಶ್ಯಕ ಬೈಲಾಗಳನ್ನು / ಉಪ ನಿಯಮಗಳನ್ನು ತಯಾರಿಸಿ ವಾರ್ಷಿಕ ಸರ್ವಸದಸ್ಯರ ಸಭೆಯ ಅನುಮೋದನೆಗೆ ಮಂಡಿಸುವುದು. | |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | | | ಅಊ)ಸಂಘದ ಧ್ಯೇಯೋದ್ದೇಶಗಳು ಮತ್ತು ನಿಯಮ ನಿಬಂಧನೆಗಳು ಹಾಗೂ ಬೈಲಾ ನಿಯಮಗಳಿಗೆ ವಿರುದ್ಧವಾಗಿ ಅವ್ಯವಹಾರಗಳನ್ನು ನಡೆಸಿದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರುಗಳು, ಸಂಘದ ಸದಸ್ಯರುಗಳು, ಸಿಬ್ಬಂದಿ ವರ್ಗದವರ ಮೇಲೆ ಶಿಸ್ತು ಕ್ರಮಕೈಗೊಳ್ಳುವುದು.<br><br>ಅಋ) ಕಾರ್ಯಕಾರಿ ಸಮಿತಿಯು ಒಂದು ತಿಂಗಳಿಗೊಮ್ಮೆ ಸಭೆ ಸೇರಿ ಸಂಘವು ನಡೆಸಬೇಕಾದ ಚಟುವಟಿಕೆಗಳನ್ನು ಚರ್ಚಿಸಿ ತೀರ್ಮಾನ ಕೈಗೊಳ್ಳುವುದು. | **ಆಡಳಿತ ಮಂಡಳಿಗೆ ಅಧಿಕಾರ ವಿಸ್ತರಣೆ** |
| 16) | **ಚುನಾವಣಾನಿಯಮಗಳು:**<br><br>ಆ) ಕಾರ್ಯಕಾರಿ ಸಮಿತಿಗೆ ಸ್ಪರ್ಧಿಸಲು ಕನಿಷ್ಠ 18 ವರ್ಷಗಳು ತುಂಬಿರಬೇಕು. | 16) | **ಚುನಾವಣಾನಿಯಮಗಳು:**<br>**ಅ) ಬದಲಾವಣೆ ಇಲ್ಲ.**<br>ಆ) ತೆಗೆದು ಹಾಕಿದೆ.<br><br>**ಇ) ಬದಲಾವಣೆ ಇಲ್ಲ.** | |
| 17) | **ಆಡಳಿತವರ್ಗದವರ ಅಧಿಕಾರ ಮತ್ತು ಕರ್ತವ್ಯ:**<br>**ಅಧ್ಯಕ್ಷರು :**<br>**ಅಧ್ಯಕ್ಷರ ಅಧಿಕಾರ ಮತ್ತು ಕರ್ತವ್ಯಗಳು**<br>ಅ) ಸೇವೆಯು ಗೌರವಯುತ ವಾಗಿರತಕ್ಕದ್ದು. | 17) | **ಆಡಳಿತವರ್ಗದವರ ಅಧಿಕಾರ ಮತ್ತು ಕರ್ತವ್ಯ:**<br>**ಅ) ಅಧ್ಯಕ್ಷರು :**<br>**ಅಧ್ಯಕ್ಷರ ಅಧಿಕಾರ ಮತ್ತು ಕರ್ತವ್ಯಗಳು**<br>ಅ) ಅಧ್ಯಕ್ಷರ ಸೇವೆಯು ಗೌರವಯುತವಾಗಿದ್ದು, ಅಧ್ಯಕ್ಷರಾಗ ಬಯಸುವವರು ಸದಸ್ಯರಾಗಿ ಕನಿಷ್ಠ | |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | | | 5 ವರ್ಷಗಳ ಆಗಿರಬೇಕು ಹಾಗೂ ಒಂದು ಅವಧಿಗೆ ನಿರ್ದೇಶಿಕರಾಗಿ ಕಾರ್ಯ ನಿರ್ವಹಿಸಿರಬೇಕು. ಒಂದು ವೇಳೆ ಎಲ್ಲಾ ಚುನಾಯಿತ ಸದಸ್ಯರು ಹೊಸಬರಾಗಿದ್ದಲ್ಲಿ, ಅಧ್ಯಕ್ಷರನ್ನು ಆಯ್ಕೆ ಮಾಡುವ ಅಧಿಕಾರ ಆ ಸಮಿತಿಗೆ ಇರುತ್ತದೆ.<br>ಅ) ಇಂದ ಋ) ವರೆಗೆ ಬದಲಾವಣೆ ಇಲ್ಲ. | |
| | ಉಪಾಧ್ಯಕ್ಷರು | | ಆ) ಉಪಾಧ್ಯಕ್ಷರು<br>ಅ) ಬದಲಾವಣೆ ಇಲ್ಲ. | |
| | ಕಾರ್ಯದರ್ಶಿ ಕೆಲಸ ಮತ್ತು ಜವಾಬ್ದಾರಿಗಳು | | ಇ) ಕಾರ್ಯದರ್ಶಿ ಕೆಲಸ ಮತ್ತು ಜವಾಬ್ದಾರಿಗಳು<br>ಅ) ಇಂದ ಔ) ವರೆಗೆ ಬದಲಾವಣೆ ಇಲ್ಲ. | |
| | ಖಜಾಂಚಿ<br>ಖಜಾಂಚಿಯು ಕೆಲಸ ಮತ್ತು ಜವಾಬ್ದಾರಿಗಳು | | ಉ) ಖಜಾಂಚಿ<br>ಖಜಾಂಚಿಯು ಕೆಲಸ ಮತ್ತು ಜವಾಬ್ದಾರಿಗಳು<br>ಅ) ಇಂದ ಋ) ವರೆಗೆ ಬದಲಾವಣೆ ಇಲ್ಲ. | |
| | ಸಹ ಕಾರ್ಯದರ್ಶಿಗಳು :<br>ಸಹ ಕಾರ್ಯದರ್ಶಿಗಳ ಕೆಲಸ ಮತ್ತು ಜವಾಬ್ದಾರಿಗಳು | | ಊ) ಸಹ ಕಾರ್ಯದರ್ಶಿಗಳು :<br>ಸಹ ಕಾರ್ಯದರ್ಶಿಗಳ ಕೆಲಸ ಮತ್ತು ಜವಾಬ್ದಾರಿಗಳು<br>ಬದಲಾವಣೆ ಇಲ್ಲ. | |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| 18) | **ಸಂಘದ ಬಂಡವಾಳ :**<br><br>**ವಿವರಣೆ :**<br>ಸಂಘದ ಯಾವುದೇ ಸಾಲವನ್ನು ತೆಗೆದುಕೊಳ್ಳಲು ಸರ್ವ ಸದಸ್ಯರ ಸಭೆಯಲ್ಲಿ ಹಾಜರಿರುವ 100 ಸದಸ್ಯರ ಬಹುಮತದ ಒಪ್ಪಿಗೆ ಮೇರೆಗೆ ಪಡೆಯಬೇಕು. | 18) | **ಸಂಘದ ಬಂಡವಾಳ :**<br>**ಅ) ಇಂದ ಈ) ವರೆಗೆ ಬದಲಾವಣೆ ಇಲ್ಲ.**<br>**ವಿವರಣೆ :**<br>ಸಂಘಕ್ಕೆ ಯಾವುದೇ ಸಾಲವನ್ನು ತೆಗೆದುಕೊಳ್ಳ ಬೇಕಾದಲ್ಲಿ ಸರ್ವ ಸದಸ್ಯರ ಸಭೆಯಲ್ಲಿ ಹಾಜರಿರುವ 1/3 ಸದಸ್ಯರ ಬಹುಮತದ ಒಪ್ಪಿಗೆ ಅವಶ್ಯಕವಿರುತ್ತದೆ. | |
| 19) | **ದಾವಾ ಮತ್ತು ಕರಾರು :** | 19) | **ದಾವಾ ಮತ್ತು ಕರಾರು :**<br>**ಬದಲಾವಣೆ ಇಲ್ಲ.** | |
| 20) | **ಸಂಘವನ್ನು ವಿಲೀನಗೊಳಿಸುವುದು:** | 20) | **ಸಂಘವನ್ನು ವಿಲೀನಗೊಳಿಸುವುದು:**<br>**ಬದಲಾವಣೆ ಇಲ್ಲ.** | |
| 21) | **ಸಂಘದ ವಿಸರ್ಜನೆ:** | 21) | **ಸಂಘದ ವಿಸರ್ಜನೆ:**<br>**ಬದಲಾವಣೆ ಇಲ್ಲ.** | |
| 22) | **ಸಂಸ್ಥೆಯ ಹೆಸರು, ನಿಯಮ ಮತ್ತು ರೆಗ್ಯುಲೇಷನ್‌ಗಳ ತಿದ್ದು ಪಡಿ (ಮೆಮೊರೆಂಡಂ ಆಫ್ ಆಸೋಸಿಯೇಷನ್)** | 22) | **ಸಂಸ್ಥೆಯ ಹೆಸರು, ನಿಯಮ ಮತ್ತು ರೆಗ್ಯುಲೇಷನ್‌ಗಳ ತಿದ್ದು ಪಡಿ (ಮೆಮೊರೆಡಂ ಆಫ್ ಆಸೋಸಿಯೇಷನ್)**<br>**ಬದಲಾವಣೆ ಇಲ್ಲ.** | |
| 23) | **ಸಂಘದ ಲಾಭಾಂಶ ವಿಲೇವಾರಿ :** | 23) | **ಸಂಘದ ಲಾಭಾಂಶ ವಿಲೇವಾರಿ :**<br>**ಬದಲಾವಣೆ ಇಲ್ಲ** | |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| 24) | **ಪ್ರಯಾಣ ಭತ್ಯೆ :** | 24) | **ಪ್ರಯಾಣ ಭತ್ಯೆ :**<br>**ಬದಲಾವಣೆ ಇಲ್ಲ** | |
| 25) | **ವಾರ್ಷಿಕ ಅವಧಿ :** | 25) | **ವಾರ್ಷಿಕ ಅವಧಿ :**<br>**ಬದಲಾವಣೆ ಇಲ್ಲ** | |
| 26) | **ಬಾಲ ಕಾರ್ಮಿಕರ ನೇಮಕ ನಿರ್ಬಂಧ :** | 26) | **ಬಾಲ ಕಾರ್ಮಿಕರ ನೇಮಕ ನಿರ್ಬಂಧ:**<br>**ಬದಲಾವಣೆ ಇಲ್ಲ** | |
| | **ಹೊಸ ಸೇರ್ಪಡೆ** | 27) | **ಬ್ಯಾಂಕು ಖಾತೆ :–**<br>ಅ) ರಾಷ್ಟ್ರೀಕೃತ ಬ್ಯಾಂಕು, ಖಾಸಗಿ ಬ್ಯಾಂಕು ಹಾಗೂ ಸಹಕಾರ ಬ್ಯಾಂಕುಗಳಲ್ಲಿ ಅಗತ್ಯವಿದ್ದಷ್ಟು ಖಾತೆಗಳನ್ನು ತೆರೆಯುವುದು ಹಾಗೂ ಸೂಕ್ತ ರೀತಿಯಲ್ಲಿ ಹಣವನ್ನು ತೊಡಗಿಸಿ ವ್ಯವಹರಿಸಲು ವ್ಯವಸ್ಥೆ ಮಾಡುವುದು.<br>ಆ) ಸಂಘದ ಬ್ಯಾಂಕಿನಲ್ಲಿ ತೆರೆದಿರುವ ಆರ್ಥಿಕ ಖಾತೆಗಳನ್ನು ಸಂಘದ ಖಜಾಂಚಿ ರವರೊಡನೆ ಕಾರ್ಯದರ್ಶಿ ಅಥವಾ ಅಧ್ಯಕ್ಷರು ಜಂಟಿಯಾಗಿ ನಿರ್ವಹಿಸುವುದು. | **ಸದಸ್ಯರುಗಳ ಅನುಕೂಲಕ್ಕಾಗಿ**<br>**ಸ್ಪಷ್ಟಪಡಿಸಿದೆ** |
| | | 28) | **ಅವಕಾಶಗಳು:–**<br>ಅ) ಸಂಘದ ಉದ್ದೇಶಗಳ ಈಡೇರಿಕೆಗಳಿಗಾಗಿ ಕಲಂ 2(15), 11, 12, 13 ಮತ್ತು 80 (ಜಿ) 1961ರ ಆದಾಯ ತೆರಿಗೆ ಕಾಯ್ದೆಯ ಪ್ರಕಾರ | **ಸದಸ್ಯರುಗಳ ಅನುಕೂಲಕ್ಕಾಗಿ** |

| ಕ್ರಮ ಸಂ. | ಹಾಲಿ ಇರುವ ಉದ್ದೇಶಗಳು | ಕ್ರಮ ಸಂ. | ಉದ್ದೇಶಿತ / ಪ್ರಸ್ತಾಪಿತ ತಿದ್ದುಪಡಿ | ಕಾರಣಗಳು |
|---|---|---|---|---|
| | | | ಸಂಘದ ಸದಸ್ಯರುಗಳಿಗೆ ಅನುಕೂಲವಾಗುವಂತೆ ಆಳವಡಿಸಿ ಕೊಳ್ಳತಕ್ಕದ್ದು. ಈ ಬಗ್ಗೆ ಆದಾಯ ತೆರಿಗೆ ಇಲಾಖೆಯಿಂದ ವಿನಾಯಿತಿಯನ್ನು ಪಡೆಯುವುದು. | |
| | | | ಆ) ಸಂಘಕ್ಕೆ ವಂತಿಗೆ ಕೊಡುವವರಿಗೆ ಆದಾಯ ತೆರಿಗೆ ಇಲಾಖೆಯಿಂದ ನಿಯಮಾವಳಿ 1961 ರ ಕಲಂ 80(ಜಿ)ನಲ್ಲಿ ವಿನಾಯಿತಿ ಪಡೆಯುವುದು. | **ದೇಣಿಗೆ ನೀಡುವವರ ಅನುಕೂಲಕ್ಕಾಗಿ** |
| | | 29) | **ಸಂಘದ ಲಾಂಛನ** **ಲೋಗೊ ಆಗಿರುತ್ತದೆ.** | **ಅಸೋಸಿಯೇಷನ್ ಅನ್ನು ಗುರುತಿಸಲು** |

ಸಹಿ/–
**ಡಿ. ಕೃಷ್ಣೇಅರಸ್**
ಅಧ್ಯಕ್ಷರು

ಸಹಿ/–
**ಉದಯ್ ಭಾಸ್ಕರ್ ಅರಸ್**
ಕಾರ್ಯದರ್ಶಿ

ತೆರೆದ–ಅಂಚೆ

ಶ್ರೀಮತಿ/ಶ್ರೀ ..............................................

.................................................................

.................................................................

ಪಿನ್.........................................................

ತಲುಪದೇ ಇದ್ದಲ್ಲಿ ಈ ಕೆಳಕಂಡ ವಿಳಾಸಕ್ಕೆ ವಾಪಸ್ಸು ಮಾಡಿ

**ಅರಸು ಅಸೋಸಿಯೇಷನ್ (ರಿ.)**

**ನೋಂದಣಿ ಸಂಖ್ಯೆ : 469/74/75**

**ನಂ. 8, "ಅರಸು ಭವನ", ಮಿಲ್ಲರ್ ಕೆರೆ, ಜಸ್ಮಾದೇವಿ ಭವನ ರಸ್ತೆ, ವಸಂತನಗರ,**
**ಬೆಂಗಳೂರು–560052**